## ಕಳೆದ ಸಂಚಿಕೆಯಲ್ಲಿ



ಸ್ವತಂತ್ರ ಭಾರತದ ಅಭಿವೃದ್ಧಿ ಮೀಮಾಂಸೆಗೆ ಮಹತ್ವದ ಕೊಡುಗೆ ನೀಡಿದ ಲೋಹಿಯಾ, ರಾಜಕೀಯ ಚಿಂತಕರಾಗಿಯೂ ಹೊಸ ಹೊಳಹುಗಳನ್ನು ನೀಡಿದವರು. ರಾಜಕೀಯದ ನಡುವಿನ ಬಿಡುವಿನಲ್ಲಿ ಪುರಾಣ–ಇತಿಹಾಸಗಳಲ್ಲಿನ ಅಪ್ರತಿಮ ನಾಯಕ ನಾಯಕಿಯರ ಕುರಿತು ಯೋಚಿಸಿದರು. ಬುದ್ಧ, ಮಹಾವೀರ, ಬಾಹುಬಲಿ, ರಾಮ, ಕೃಷ್ಣ, ಶಿವ, ಮುಂತಾದ ಮಹಾನ್ ವ್ಯಕ್ತಿತ್ವ–ಪಾತ್ರಗಳ ಕುರಿತ ಲೋಹಿಯಾ ಅವರ ಚಿಂತನೆಗಳು ಆಯಾ ನಾಯಕರ ಕುರಿತ ನಮ್ಮ ಅದುವರೆಗಿನ ಯೋಚನೆಗಳಿಗಿಂತ ಭಿನ್ನವಾಗಿದ್ದವು. ಸೌಂದರ್ಯ, ಪ್ರೇಮ ಹಾಗೂ ಸತ್ಯದ ಹಾದಿಯ ಲೋಹಿಯಾ ಅನ್ವೇಷಣೆ ಜಡವಾಗಿರದೆ, ಲೋಕದ ಸಾಮಾನ್ಯ ಕಣ್ಣಿಗೆ ಕಾಣಿಸದ ಮಹಾನ್ ವ್ಯಕ್ತಿತ್ವಗಳ ಒಳ ರಮ್ಯಲೋಕವನ್ನು ಚಿತ್ರಿಸುವ ಪ್ರಯತ್ನವಾಗಿತ್ತು. ಲೋಹಿಯಾ ಸಂಸ್ಕೃತಿ ಕಥನದಲ್ಲಿ ಇತಿಹಾಸದ ಕಲ್ಲು, ಶಿಲ್ಪ ಎಲ್ಲವೂ ಜೀವಂತ; ಬುದ್ಧ, ಏಸು, ದ್ರೌಪದಿ, ಸಾವಿತ್ರಿ, ಪ್ರಹ್ಲಾದ, ರಾಮ, ಕೃಷ್ಣ, ಶಿವ ಎಲ್ಲರೂ ಸಮಕಾಲೀನರು! ಇದು ಲೋಹಿಯಾರೊಳಗಿದ್ದ ಒಬ್ಬ 'ಸಾಂಸ್ಕೃತಿಕ ಕಾದಂಬರಿಕಾರ'ನ ನೋಟದ ಫಲವೂ ಆಗಿತ್ತು.

ಅಳಿಯ ಸರ್ಪವನ್ನು ಕೊರಳಿಗೆ ಹಾಕಿಕೊಂಡದ್ದನ್ನು, ಬೂದಿ ಬಳಿದುಕೊಂಡದ್ದನ್ನು ನೋಡಿ ದುಃಖವಾಗುತ್ತದೆ. ಮದುವೆ ದಿಬ್ಬಣದಲ್ಲಿ ಕುಂಟರನ್ನು, ಹೆಳವರನ್ನು ನೋಡಿ ತಾಯಿ ಕಳವಳಗೊಂಡಿದ್ದಾಳೆ. ದುಃಖಿಯಾದ ಇವಳನ್ನು ಸುತ್ತಲಿನವರು ಸಮಾಧಾನ ಮಾಡುತ್ತಾರೆ. ಸ್ವತಃ ಶಿವನೇ ಆಕೆಯನ್ನು ಸಮಾಧಾನಪಡಿಸುತ್ತಾನೆ.

'ಅಲ್ಲಿದ್ದವರೆಲ್ಲ ಮದುಮಗಳ ತಾಯಿಗೆ 'ನೀನು ಯಾಕೆ ದುಃಖಿಯಾಗಿದ್ದೀ? ನಿನ್ನ ಪ್ರೀತಿಯ ಮಗಳು ತುಂಬ ಸುಖಿಯಾಗಿರುತ್ತಾಳೆ; ನೀನು ನೋಡುತ್ತಿರುವುದು ಅಳಿಯನ ಬಾಹ್ಯಪ್ರತೀಕಗಳಷ್ಟೇ. ಇವನ್ನು ನೋಡಿ ಗಾಬರಿಯಾಗಬೇಡ' ಎಂದು ಹೇಳಿದರು. ಆ ಬಡಪಾಯಿಗೆ ಎಲ್ಲ ಗೊತ್ತಿತ್ತು. ಏಕೆಂದರೆ ವಾಸ್ತವ ಬೇರೆಯಾಗಿತ್ತು.'

ಆಗ ಪಾರ್ವತಿಯ ತಾಯಿಯ ಬಾಯಿಂದ ಹೊರಟ 'ಹೆಣ್ಣಿಗೇಕೆ ಜನ್ಮಕೊಟ್ಟು ಭೂಮಿಯಲ್ಲಿ ಬ್ರಹ್ಮನು' ಎಂಬ ಉದ್ಗಾರವನ್ನು ಉಲ್ಲೇಖಿಸುತ್ತಾ ಲೋಹಿಯಾ ಹೇಳುತ್ತಾರೆ:

'ಗಂಡು ಹೆಣ್ಣಿನ ಸಂಬಂಧದ ಬಗೆಗೆ ಕೊಳಕು ಪರಿಕಲ್ಪನೆಗಳ ಆಧಾರದ ಮೇಲೆ ಭಾರತೀಯ ಸಾಹಿತ್ಯ ಬಹಳ ಸುಂದರವಾದುದನ್ನೇ ರಚಿಸಿದೆಯಾದರೂ ಈ ಕವಿತೆಗಿಂತಲೂ ಸುಂದರವಾದ ಸಾಲುಗಳನ್ನು ನಾನು ಇನ್ನೆಲ್ಲೂ ಓದಿಲ್ಲ. 'ಹೇ ಖುದಾ ಅಥವಾ ಪರಮಾತ್ಮ, ನೀನು ಹೆಣ್ಣನ್ನು ಯಾಕೆ ನಿರ್ಮಿಸಿದೆ, ಅವಳನ್ನು ಸೃಷ್ಟಿಸಿದ್ದಾದರೂ ಯಾಕೆ?' ಎಂದು ಹೆಣ್ಣು ಕೇಳುತ್ತಿದ್ದಾಳೆ. ಪರಾಧೀನಳಾದ ಅವಳಿಗೆ ಕನಸಿನಲ್ಲೂ ಸುಖವೆಂಬುದಿಲ್ಲ. ಒಂದು ಹಂತದ ತನಕ ಗಂಡಿನ ಅಧೀನಳಾಗಿರುವಂತೆ ಮಾಡಿಯೇ ಹೆಣ್ಣನ್ನು ಬ್ರಹ್ಮ ಸೃಷ್ಟಿಸಿದ್ದಾನೆ.'

ಕವಿತೆಯನ್ನು ಚರ್ಚಿಸುತ್ತಲೇ ಲೋಹಿಯಾ ಸಮಕಾಲೀನ ಭಾರತದತ್ತ ಮರಳುತ್ತಾರೆ:

'ಹೆಣ್ಣಿನ ಕೆಲಸ ಮಕ್ಕಳಿಗೆ ಜನ್ಮಕೊಡುವುದು ಎಂದು ಸಮ್ಮೇಳನಗಳಲ್ಲಿ ಜನ ಹೇಳುತ್ತಾರೆ. ಅದೂ ಒಂದು ಕಾಯಕವೆಂದಾದರೆ, ಅದೂ ಪರಾಧೀನತೆಯ ಕಾರ್ಯವೇ. ತಾನು ಎಲ್ಲಿ ಊಟ ಮಾಡಬೇಕು, ಊಟ ಮಾಡಿಸಬೇಕು, ಏನು ಮಾಡಬೇಕು, ಏನು ಮಾಡಬಾರದು ಎಂಬೆಲ್ಲ ವಿಚಾರಗಳಲ್ಲೂ ಆಕೆ ಪರಾಧೀನಳೇ.'

ಆದರೂ 'ಈಗ ಸಮಾಜ ಹೇಗೆ ರೂಪುಗೊಳ್ಳುತ್ತಿದೆಯೆಂದರೆ, ಆಕೆಯ ಪರಾಧೀನತೆಯನ್ನು ಕಡಿಮೆ ಮಾಡಲಾಗುತ್ತಿದೆ' ಎಂಬ ಸೂಚನೆಗಳೂ ಲೋಹಿಯಾಗೆ ಕಾಣುತ್ತವೆ. ಮಹಿಳೆಯರಿಗೆ ಹೆಚ್ಚು ಹೆಚ್ಚು ರಾಜಕೀಯ ಪ್ರಾತಿನಿಧ್ಯದ ಮೂಲಕವೂ ಈ ಅಧೀನತೆಯನ್ನು ಹಿಮ್ಮೆಟ್ಟಿಸಲು ಲೋಹಿಯಾ ಸಮಾಜವಾದಿ ಪಕ್ಷವನ್ನು ತಯಾರು ಮಾಡಲೆತ್ನಿಸಿದರು.

* * *

ಲೋಹಿಯಾ ಸೃಜನಶೀಲ ಚಿಂತಕರಾದ್ದರಿಂದ ಅವರು ಪುರಾಣಗಳನ್ನು ಏಕಮುಖ ವೈಚಾರಿಕ ದೃಷ್ಟಿಕೋನದಿಂದ ನೋಡುತ್ತಿರಲಿಲ್ಲ. ಪಾರ್ವತಿಯ ಕಷ್ಟ ಕುರಿತು ಚರ್ಚಿಸುತ್ತಿರುವಾಗ ಶಿವ, ಪಾರ್ವತಿಯರ ನೃತ್ಯದಲ್ಲಿ ಪಾರ್ವತಿಗೆ ಎದುರಾದ ಇರಸುಮುರಸು ಕೂಡ ಲೋಹಿಯಾಗೆ ನೆನಪಾಗುತ್ತದೆ:

'ಶಿವನ ಒಂದು ಕೆಲಸವನ್ನು ಸಮರ್ಥಿಸುವುದು ಕಷ್ಟ. ಶಿವ ಒಮ್ಮೆ ಪಾರ್ವತಿಯೊಡನೆ ಪಂಥ ಕಟ್ಟಿ ನರ್ತಿಸಿದ. ಹೆಜ್ಜೆಗೆ ಹೆಜ್ಜೆ ಕೊಟ್ಟು ಪಾರ್ವತಿ ಶಿವನನ್ನು ಮೀರಿಸಿದಳು. ಕುಣಿತದ ಗತಿ ತೀವ್ರತೆಗೆ ಏರುತ್ತಿತ್ತು. ಪಾರ್ವತಿಯನ್ನು ಸೋಲಿಸುವುದಕ್ಕೆ ಆಗದೆಂದು ಕಂಡ ಶಿವ, ಒಂದು ಕ್ಷಣದಲ್ಲಿ ನೃತ್ಯಚಾರಿಯನ್ನೇ ಬದಲಿಸಿದ. ಕಾಲನ್ನು ಅಷ್ಟೆತ್ತರಕ್ಕೆತ್ತಿದ. ಪಾರ್ವತಿ ನಿಬ್ಬೆರಗಾಗಿ ನಿಂತುಬಿಟ್ಟಳು. ಹೆಣ್ಣಿನ ಮರ್ಯಾದೆಗೆ ತೀರ ಮೀರಿದಂಥ ಆ ಭಂಗಿಯನ್ನು ಅಭಿನಯಿಸಲು ಅವಳಿಗೆ ಅಸಾಧ್ಯವಾಗಿತ್ತು. ತನ್ನ ಪತಿ ಇಂಥ ಅಸಾಧು ಮಾರ್ಗಕ್ಕೆ ಮೊರೆಹೊಕ್ಕದ್ದು ಕಂಡು ಆಕೆ ಅಪ್ರತಿಭಳಾದಳು.'

ಈ ಪ್ರಸಂಗವನ್ನು ನೆನೆಯುವಾಗ ಲೋಹಿಯಾರೊಳಗಿನ ತತ್ವಜ್ಞಾನಿಗೆ ಹೀಗೆನ್ನಿಸುತ್ತದೆ:

'ಬದುಕಿನ ಕುಣಿತದಲ್ಲಿ ಅಂಥ ಹುಚ್ಚು ನೆಗೆತಗಳಿವೆ. ಯಾವುದನ್ನು ಲೋಕದ ಮಡಿಬುದ್ಧಿ ಅಶ್ಲೀಲವೆನ್ನುತ್ತದೋ ಮತ್ತು ಅಂಥದರಿಂದ ತನ್ನ ಹೆಣ್ಣುಗಳ ಮರ್ಯಾದೆಯನ್ನು ರಕ್ಷಿಸಲು ಹೆಣಗುತ್ತದೋ ಅಂಥ ನೆಗೆತಗಳಿವೆ. ಶಿವ ಅಂಥ ಗಂಡುಭಂಗಿಯನ್ನು ತೋರಿದ್ದು ಪಂಥದಲ್ಲಿ ತಾನು ಸೋತು ಹೋಗಲಿದ್ದಾಗ, ಅದನ್ನು ಮೋಸದಿಂದ ಮರೆಸಿ ಹೇಗೋ ಗೆಲುವು ಪಡೆಯುವ ಸಲುವಾಗಿಯೇ? ಅಥವಾ, ಅಷ್ಟೇ ಮುಖ್ಯವಾಗಿ, ಹೆಜ್ಜೆಯಿಂದ ಹೆಜ್ಜೆಗೆ ಲಯ ಕಾವೇರುತ್ತ, ಸಹಜ ತೀವ್ರಗೊಂಡು ವಿಜೃಂಭಿಸುವ ಬದುಕಿನ ಕುಣಿತದ ಅಂಗಮಾತ್ರವಾಗಿಯೇ?'

ಪುರಾಣಗಳು ಹೆಣ್ಣಿನ ಅಧೀನತೆಗೆ ಕಾರಣವಾದದ್ದನ್ನು ಚರ್ಚಿಸುತ್ತಿರುವಾಗಲೂ, ಈ ಕತೆಗಳ ಸಾಂಕೇತಿಕ ಗುಣಗಳನ್ನು ಲೋಹಿಯಾ ಗ್ರಹಿಸುತ್ತಲೇ ಇರುತ್ತಾರೆ. ಶಿವ ಹಣೆಗಣ್ಣು ತೆರೆದು ಕಾಮನನ್ನು ಸುಟ್ಟಾಗ ರತಿಯ ಶೋಕ ಅವರನ್ನು ಕರಗಿಸುತ್ತದೆ; ಕಾಮನ ಮರುಜನ್ಮದ ಸಾಂಕೇತಿಕತೆಯೂ ಹೊಳೆಯುತ್ತದೆ:

'ಇನ್ನು ಮುಂದೆ ರತಿಯಿಲ್ಲದೆಯೇ ರತಿಕ್ರೀಡೆ ನಡೆಯಬೇಕಿತ್ತು. ಆದರೆ ಶಿವನಾದರೂ ಆಗಿದ್ದನ್ನು ಮನ್ನಿಸಿ, ಬದಲಿಸುವ ಹಾಗಿರಲಿಲ್ಲ. ರತಿ ಪ್ರಲಾಪಿಸುತ್ತಿದ್ದಳು. ದುರ್ವಿಧಿಯ ಸುಳಿಗೆ ಸಿಕ್ಕ ಜಗತ್ತನ್ನು ಕಂಡೋ ಅಥವಾ ರತಿಯ ಶೋಕ ಕಂಡೋ, ಶಿವನಿಗೆ ಕರುಣೆಯುಕ್ಕಿತು. ಕಾಮನಿಗೆ ಜೀವ ಕೊಟ್ಟ. ಆದರೆ ಅನಂಗನಾಗಿರುವಂತೆ ವಿಧಿಸಿದ. ಆಗಿನಿಂದ ಕಾಮ ಅನಂಗನಾಗಿಯೇ ಇದ್ದಾನೆ. ಅನಂಗನಾಗಿರುವ ಕಾರಣ, ಅವನನ್ನು ತಡೆಯಬಲ್ಲ ಮೇರೆ ಮರ್ಯಾದೆಗಳಿಲ್ಲ; ಅವನು ಎಲ್ಲವನ್ನೂ ಮುಟ್ಟಬಲ್ಲ, ಎಲ್ಲವನ್ನೂ ಆವರಿಸಿ ವ್ಯಾಪಿಸಬಲ್ಲ, ಹೊಕ್ಕು ಬಳಸಬಲ್ಲ. ಪತ್ತೆಯಿಲ್ಲದೆ ಬಂದು ಒಳಗು ಸೇರಿ ಕಿರಿಕಿರಿ ಹಚ್ಚಿ ಕಾಡಬಲ್ಲ...'

ಲೋಹಿಯಾ ಜೀವನಯಾನದ ಓದುಗ, ಓದುಗಿಯರಿಗೆ ಈ ಕತೆಗಳು ಪರಿಚಿತವಿರಬಹುದು. ಆದರೆ ಲೋಹಿಯಾರ ವಿಶಿಷ್ಟ ಸಮಾಜವಾದಿ ಓದಿನಲ್ಲಿ ಪುರಾಣ ಪಾತ್ರಗಳ ಸಮಕಾಲೀನ ಗುಣಗಳು ಆಪ್ತ ಹಾಗೂ ಆತ್ಮೀಯವಾಗತೊಡಗುತ್ತವೆ.

* * *

ಭಾರತದ ಪುರಾಣ ಸ್ತ್ರೀಯರಂತೆ ಚರಿತ್ರೆಯ ವಿಶಿಷ್ಟ ಸ್ತ್ರೀಯರೂ ಲೋಹಿಯಾ ಮನಸ್ಸನ್ನು ಆಕ್ರಮಿಸಿಕೊಳ್ಳುತ್ತಾರೆ:

'ಮೈತ್ರೇಯಿ, ಗಾರ್ಗಿ ಇಬ್ಬರೂ ಪ್ರಸಿದ್ಧರು. ಲೀಲಾವತಿ ಗಣಿತಶಾಸ್ತ್ರಕ್ಕೆ ಸಂಬಂಧಪಟ್ಟವಳು. ದಾರ್ಶನಿಕ ಮಹಿಳೆಯರಿಗೂ ಭಾರತ ಜನ್ಮ ನೀಡಿದೆ. ಪ್ರಪಂಚದ ಬೇರೆಲ್ಲೂ ಬಹುಶಃ ಇಂಥ ಮಹಿಳೆಯರಿಲ್ಲ.'

ಲೋಹಿಯಾರ ಭಾರತೀಯ ಸ್ತ್ರೀಕೇಂದ್ರಿತ